- ವಿದ್ಯುತ್ ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ಸುರಕ್ಷತೆಗಾಗಿ 2013–14ನೇ ಸಾಲಿನಲ್ಲಿ, ಬೆಸ್ಕಾಂ ವತಿಯಿಂದ ₹ 10.94 ಕೋಟಿಯಷ್ಟು ವೆಚ್ಚ ಮಾಡಲಾಗಿದೆ.
- ಸುರಕ್ಷತೆಗಾಗಿ, 2014–15ನೇ ಸಾಲಿನಲ್ಲಿ ಬೆಸ್ಕಾಂ ₹ 37 ಕೋಟಿಯಷ್ಟು ಬಜೆಟ್ ಹಂಚಿಕೆ ಮಾಡಿರುತ್ತದೆ.
- ಸುರಕ್ಷತೆ ಬಗ್ಗೆ ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ ಜಾಹಿರಾತುಗಳು ಹಾಗೂ ಚಿತ್ರ ಮಂದಿರದಲ್ಲಿ ಸ್ಲೈಡ್ ಮೂಲಕ, ಬಿ.ಎಂ.ಟಿ.ಸಿ ವಾಹನಗಳ ಮೇಲೆ ಫಲಕದ ಮೂಲಕ ಪ್ರದರ್ಶಿಸಲಾಗಿದೆ ಹಾಗೂ ಕರಪತ್ರಗಳಲ್ಲಿ ಸುರಕ್ಷಾ ವಿಷಯಗಳನ್ನು ಮುದ್ರಿಸಿ ಎಲ್ಲಾ ಗ್ರಾಹಕರಿಗೂ ಹಂಚಲಾಗುತ್ತಿದೆ.
- ಶಾಲಾ ಮಕ್ಕಳಿಗೆ ವಿದ್ಯುತ್ ಸುರಕ್ಷತಾ ವಿಧಾನದ ಬಗ್ಗೆ ತಿಳಿ ಹೇಳುವುದಕ್ಕೆ ಸುರಕ್ಷಾ ಕ್ಯಾಂಪ್ ಮಾಡಲಾಗುತ್ತಿದೆ.
- ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಅದಕ್ಕೆ ಎ.ಬಿ ಕೇಬಲ್ ಹಾಕಲಾಗುತ್ತಿದೆ, ಜೋತು ಬಿದ್ದ ವಾಹಕಗಳನ್ನು ಸರಿಪಡಿಸುವುದು, ಮಧ್ಯಂತರ ಕಂಬಗಳನ್ನು ಹಾಕುವುದು ಇತ್ಯಾದಿ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1816(756); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಅ) ರಾಜ್ಯ ಹೆದ್ದಾರಿ–19 ಹಿರಿಯೂರಿನಿಂದ (ಆರಂಭವಾಗಿ ಎನ್‌ಹೆಚ್‌ಜಿ) ಬಳ್ಳಾರಿ ಮಾರ್ಗವಾಗಿ ಜೇವರ್ಗಿವರೆಗೆ (ಎನ್‌ಹೆಚ್–18) ರಾಷ್ಟ್ರೀಯ ಹೆದ್ದಾರಿಯ 400 ಕಿಮೀ ಲಿಂಕ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ರಾಜ್ಯ ಹೆದ್ದಾರಿ–23 ಮತ್ತು 30 ಕುಷ್ಟಗಿಯಿಂದ (ಎನ್‌ಹೆಚ್–13) ಸಿಂಧನೂರು, ರಾಯಚೂರು ಮಾರ್ಗವಾಗಿ ಮುಂದುವರೆದು ಆಂಧ್ರ ಪ್ರದೇಶ ಓಡಚರೇಲಾದವರೆಗೆ (ಎನ್‌ಹೆಚ್–7) ಸುಮಾರು 300 ಕಿಮೀ ವರೆಗೆ ಎರಡು ರಾಷ್ಟ್ರೀಯ ಹೆದ್ದಾರಿಗಳನ್ನು ಲಿಂಕ್ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಇ) ಸಿಂಧನೂರು ಪಟ್ಟಣಕ್ಕೆ ಕೇಶಿಪ್–1 ರಲ್ಲಿ ಬೈಪಾಸ್ ರಸ್ತೆ ಮಂಜೂರಾಗಿದ್ದು, ಯಾವ ಕಾರಣಕ್ಕೆ ಆ ಬೈಪಾಸ್ ರಸ್ತೆಯನ್ನು ಕೈಬಿಡಲಾಗಿದೆ;

ಈ) ಕೇಶಪ್–1ರ ಯೋಜನೆಯಲ್ಲಿ ಸಿಂಧನೂರು ಪಟ್ಟಣಕ್ಕೆ ಬೈಪಾಸ್ ರಸ್ತೆ ಸೇರಿಸಲಾಗಿದ್ದು, ಯಾವ ಕಾರಣಕ್ಕೆ ಈ ರಸ್ತೆ ಕೆಲಸವನ್ನು ಕೈಬಿಡಲಾಗಿದೆ?

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಜೇವರ್ಗಿಯಿಂದ ಬಳ್ಳಾರಿ, ಹಿರಿಯೂರು, ಶ್ರೀರಂಗಪಟ್ಟಣ ಮಾರ್ಗವಾಗಿ ಚಾಮರಾಜನಗರದವರೆಗೆ ರಾಷ್ಟ್ರೀಯ ಹೆದ್ದಾರಿ–150'ಎ' ಎಂದು ದಿನಾಂಕ 28.05.2014ರಂದು ಕೇಂದ್ರ ಸರ್ಕಾರವು ಘೋಷಿಸಿರುತ್ತದೆ.

ಆ) ಇಲ್ಲ

ಇ) **ಮತ್ತು ಈ)** ದಿನಾಂಕ 03.11.2003ರಂದು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಯೋಜನಾ ಆಡಳಿತ ಮಂಡಳಿಯ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಸಿಂಧನೂರು ಪಟ್ಟಣದ ಮೂಲಕ ಹಾದು ಹೋಗುವ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗುತ್ತಿದ್ದು, ಪ್ರತ್ಯೇಕವಾಗಿ ಬೈಪಾಸ್

ರಸ್ತೆಯ ನಿರ್ಮಾಣದ ಕಾಮಗಾರಿಯನ್ನು ಕೈಬಿಡಲಾಗಿದೆ; ಹಾಗೂ ಕೆಶಿಪ್ ಯೋಜನೆ–1 ಈಗಾಗಲೇ ಮುಕ್ತಾಯಗೊಂಡಿರುತ್ತದೆ.

ಚನ್ನರಾಯಪಟ್ಟಣ ಪುರಸಭೆಯ ಉನ್ನತೀಕರಣ

1817(179); ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೋಳ)

ಅ) ಶ್ರವಣಬೆಳಗೋಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಚನ್ನರಾಯಪಟ್ಟಣದ ಪುರಸಭೆಯನ್ನು ನಗರಸಭೆಯನ್ನಾಗಿ ಉನ್ನತೀಕರಿಸಲು ಉದ್ದೇಶಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಪುರಸಭೆಯನ್ನು ನಗರಸಭೆಯನ್ನಾಗಿ ಉನ್ನತೀಕರಿಸಲು ಇರುವ ಮಾನದಂಡಗಳೇನು;

ಇ) ಈ ಪುರಸಭೆಯು ಹೆಚ್ಚು ಸಾಂದ್ರತೆಯನ್ನು ಹೊಂದಿದ್ದು, ಈ ಪಟ್ಟಣವನ್ನು ಮೂಲಭೂತ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಿ ನಗರಸಭೆಯನ್ನಾಗಿ ಪರಿವರ್ತಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಇಲ್ಲ

ಆ) ಪುರಸಭೆಯನ್ನು ನಗರಸಭೆಯನ್ನಾಗಿ ಉನ್ನತೀಕರಿಸಲು ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ ಕಲಂ 3 ರನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತದೆ:

1. ಅಂಥ ಪ್ರದೇಶದ ಜನಸಂಖ್ಯೆ ಐವತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಮತ್ತು ಮೂರು ಲಕ್ಷಕ್ಕಿಂತ ಹೆಚ್ಚಿಲ್ಲದ ಹೊರತು;